PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 6, May-Jun 2020, 72-76
©*IIMRD*, Mysuru

www.iimrd.com

# ಸರ್ವಜ್ಞನ ದೃಷ್ಟಿಯಲ್ಲಿ ಮಾದರಿ ಗುರು–ಶಿಷ್ಯರು: ಕೆಲವು ತ್ರಿಪದಿಗಳ ಅವಲೋಕನ

**ಶಿವಾನಂದ ಹಿರೇಮಠ***

**ಪೀಠಿಕೆ**

ಪ್ರಪಂಚದಲ್ಲಿ ತನ್ನದೇಯಾದ ವೈಶಿಷ್ಟ್ಯತೆಗಳನ್ನು ಹೊಂದಿರುವ ರಾಷ್ಟ್ರಗಳಲ್ಲಿ ಭಾರತವು ಅತ್ಯಂತ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ವಿಜ್ಞಾನ–ತಂತ್ರಜ್ಞಾನ, ತತ್ವಜ್ಞಾನ ಮತ್ತು ವೈದ್ಯಕೀಯ ವಿಜ್ಞಾನ ಕ್ಷೇತ್ರಕ್ಕೆ ಅದರ ಕೊಡುಗೆ ಅಪಾರವಾದುದಾಗಿದೆ. ಅದರಲ್ಲೂ ಪ್ರಾಚೀನ ಕಾಲದಿಂದ ಇಂದಿನವರೆಗೂ ಶಿಕ್ಷಣ ಕ್ಷೇತ್ರಕ್ಕೆ ಚಿರಸ್ಥಾಯಿಯಾದ ಹೊಸ ಸಿದ್ಧಾಂತಗಳನ್ನು ಕೊಡುವುದರ ಮುಖೇನ ಮಹತ್ವವನ್ನು ಪಡೆದುಕೊಂಡಿದೆ. ಹಿಂದೆ ಜಂಬೂದ್ವೀಪದಲ್ಲಿ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯನ್ನು ಅನುಸರಿಸಲಾಗುತ್ತಿತ್ತು. ಮಗುವಿಗೆ ಎಂಟು ವರ್ಷದವನಿದ್ದಾಗ ಉಪನಯನವನ್ನು ನೆರವೇರಿಸಿ ವಿದ್ಯಾಭ್ಯಾಸಕ್ಕಾಗಿ ಗುರುಕುಲಕ್ಕೆ ಕಳುಹಿಸಲಾಗುತಿತ್ತು. ಮಕ್ಕಳ ಸರ್ವತೋಮುಖ ಅಭಿವೃದ್ದಿಯಲ್ಲಿ ಗುರುವಿನ ಪಾತ್ರ ಮಹತ್ವದಾಗಿತ್ತು. ಅದಕ್ಕಾಗಿ ಗುರುಗಳು ಹಗಲಿರುಳು ಶ್ರಮಿಸುತ್ತಿದ್ದರು. ವೇದ, ಆಗಮ, ಪುರಾಣ, ವ್ಯಾಕರಣ, ಜ್ಯೋತಿಷ್ಯಶಾಸ್ತ್ರ, ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಹೀಗೆ ಎಲ್ಲ ವಿದ್ಯೆಗಳಲ್ಲೂ ಪಾರಾಂಗತನನ್ನಾಗಿ ಮಾಡಿ ಕಾಡುಕಲ್ಲನ್ನು ಸುಂದರವಾದ ಶಿಲ್ಪವನ್ನಾಗಿಸುತಿದ್ದರು. ಗುರುಗಳಾದವರು ನಿಸ್ವಾರ್ಥ ಮನದ, ನಿರ್ಮಲ ಹೃದಯದವರಾದುದರಿಂದ ಇಡೀ ಸಮಾಜವೇ ಅವರನ್ನು ಗೌರವದಿಂದ ಕಾಣುತ್ತಿತ್ತು. ವಿದ್ಯೆ ಕಲಿಯಲು ಹೋದ ಶಿಷ್ಯನೂ ಸಹ ನಯ–ವಿನಯದಿಂದ ಗುರುಸೇವೆಯನ್ನು ಮಾಡುತ್ತ ಎಲ್ಲ ವಿದ್ಯೆಯನ್ನು ಕರಗತ ಮಾಡಿಕೊಳ್ಳುತ್ತಿದ್ದನು.

ಗುರು ಹಾಗೂ ಶಿಷ್ಯರು ಹೀಗೆಯೇ ಬದುಕಬೇಕೆಂಬ ಮನೋಕಟ್ಟಳೆಗಳು ನೈಸರ್ಗಿಕವಾಗಿ ಜಾರಿಯಲ್ಲಿರುತ್ತಿದ್ದವು. ಗುರುವಾದವನು ಶಿಷ್ಯನ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸುವಲ್ಲಿ ಸದಾ ತೊಡಗಿರುತ್ತಿದ್ದನು. 'ಶಿಷ್ಯಾದಿಚ್ಛೇತ ಪರಾಜಯಂ' ಎಂಬಂತೆ ಸಾಧನೆಗೈದರೆ ಗುರು ತೃಪ್ತನಾಗುತ್ತಿದ್ದ. ರಾಮಾಯಣ ಮಹಾಭಾರತ ಗ್ರಂಥಗಳಲ್ಲಿಯೂ ಗುರು–ಶಿಷ್ಯರಿಗೆ ಸಂಬಂಧಿಸಿದ ನೂರಾರು ಕಥೆಗಳು ಸಾಕ್ಷಿಯಾಗಿ ನಿಲ್ಲುತ್ತವೆ. ದ್ರೋಣಾಚಾರ್ಯ–ಅರ್ಜುನ, ವಾಲ್ಮಿಕಿ–ಲವಕುಶರಲ್ಲಿ ಸಾಂಪ್ರದಾಯಿಕ ಗುರುಕುಲ ಶಿಕ್ಷಣವನ್ನು ಕಾಣಬಹುದಾಗಿದೆ. ಮಾನಸ ಗುರುವಾಗಿ ದ್ರೋಣಾಚಾರ್ಯರನ್ನು ಸ್ವೀಕರಿಸಿದ ಏಕಲವ್ಯ ಬಿಲ್ವಿದ್ಯೆಯ ಉತ್ತುಂಗ ಶಿಖರವನ್ನು ತಲುಪಿದ್ದು, ವಿದ್ಯೆಯಲ್ಲಿ ಗುರುವಿನ ಅಗತ್ಯತೆಯನ್ನು ನಿದರ್ಶನವಾಗಿಸುತ್ತದೆ. ಅಭೌತಿಕವಾಗಿ ಗುರು ಹಿಂದೆ ನಿಂತು ದಾರಿ ತೋರಿದ್ದನ್ನು ಕಾಣಬಹುದು. ಕತ್ತಲೆಯನ್ನು ದೂರವಾಗಿಸುವ ಗುರು ದೈವ ಸ್ವರೂಪನಾಗಿ ನಿಲ್ಲುತ್ತಾನೆ.

* *ಸಹಾಯಕ ಪ್ರಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಸುಲೇಪೇಟ, ಚಿಂಚೋಳಿ ತಾಲೂಕು, ಕಲಬುರಗಿ ಜಿಲ್ಲೆ.*

ಕನ್ನಡ ಸಾಹಿತ್ಯದಲ್ಲಿ ಗುರುಶಿಷ್ಯರಿಗೆ ಸಂಬಂಧಿಸಿದ ಸಾಕಷ್ಟು ನೈತಿಕ ವಿಚಾರಗಳು ಬಂದಿರುವುದನ್ನು ಕಾಣುತ್ತೇವೆ. ಚಂಪೂ ಕವಿಗಳು, ವಚನಕಾರರು, ಷಟ್ಪದಿ ಕವಿಗಳು ಹಲವಾರು ಕಾವ್ಯ ಸಂದರ್ಭಗಳಲ್ಲಿ ಗುರುಶಿಷ್ಯರ ನಡುವಣ ಸಂಬಂಧವನ್ನು ಚರ್ಚಿಸಿದ್ದಾರೆ. ಅದರಲ್ಲಿ ತ್ರಿಪದಿ ಚಕ್ರವರ್ತಿ ಸರ್ವಜ್ಞ ಮೇಲ್ಪಂಕ್ತಿಯಲ್ಲಿ ನಿಲ್ಲುವ ಚಾರಣ ಕವಿಯಾಗಿದ್ದಾನೆ. ಲಿಂಗಪೂಜೆ, ಭಕ್ತಿ, ವಿಷಯಾಸಕ್ತಿ, ಜಾತಿ, ಸಜ್ಜನ–ದುರ್ಜನ ಹೀಗೆ ನೂರಾರು ವಿಚಾರಗಳ ಮೇಲೆ ತ್ರಿಪದಿಗಳನ್ನು ರಚಿಸಿ ಆಡು ಮುಟ್ಟದ ಸೊಪ್ಪಿಲ್ಲ ಸರ್ವಜ್ಞ ಹೇಳದ ವಿಷಯವಿಲ್ಲ ಎಂಬ ಕೀರ್ತಿಗೆ ಭಾಜನನಾಗಿದ್ದಾನೆ.

**ಗುರುವಿನ ಮಹತ್ವ**

ಸರ್ವಜ್ಞಮೂರ್ತಿಯು ಗುರುವಿನ ಅರ್ಹತೆಗಳನ್ನು ಹಾಗೂ ಜವಾಬ್ದಾರಿಗಳನ್ನು ತುಂಬಾ ಮಾರ್ಮಿಕವಾಗಿ ತನ್ನ ವಚನಗಳಲ್ಲಿ ಸಾದರಪಡಿಸುತ್ತಾನೆ.

***ಗುರುವಿನಾ ವಿಸ್ತರದ । ಪರಿಯನಾನೇನೆಂಬೆ ।***

***ಮೆರೆವ ಬ್ರಹ್ಮಾಂಡದೊಳ ಹೊರಗೆ ।***

***ಅವ ಬೆಳಗಿ ಪರಿಪೂರ್ಣನಿಪ್ಪ ಸರ್ವಜ್ಞ ॥***

ಗುರುವಿನ ವಿಸ್ತಾರವು ಹೇಳಲು ಅಸದಳವಾದುದು, ಅದು ಬ್ರಹ್ಮಾಂಡದ ಒಳಗೂ ಹೊರಗೂ ವ್ಯಾಪಿಸಿರುವುದು. ಗುರು ಸಾಮಾನ್ಯನಲ್ಲ ಆತ ಪರಿಪೂರ್ಣ ಎಂದು ಹೇಳುತ್ತದೆ. ಆ ಮಾತು ಅಕ್ಷರಶಃ ಸತ್ಯವಾದುದು 'ಬೀಜದಂತೆ ಬೆಳೆ' ಎಂಬ ಗಾದೆಯಂತೆ ಪರಿಪೂರ್ಣ ಗುರುವಿನಿಂದ ಮಾತ್ರ ಪರಿಪೂರ್ಣ ಶಿಷ್ಯ ಹೊರಬರಲು ಸಾಧ್ಯವಾಗುತ್ತದೆ. ಪರಿಪೂರ್ಣ ಎಂಬ ಮಾತು ಎಲ್ಲ ವಿದ್ಯೆಗಳ ಕರತಲಾಮಲಕ ಎಂಬ ಗೂಢಾರ್ಥವನ್ನು ಸಂಕೇತಿಸುತ್ತದೆ. ಮರದೊಳಗೆ ಮಂದಾಗ್ನಿ ಇದ್ದರೂ ಅದು ಕಾಣದು, ಹಾಗೆಯೇ ದೇಹದಲ್ಲಿರುವ ಆತ್ಮ ಅಥವಾ ಶಿವನನ್ನು ಕಾಣುವುದು ಸುಲಭದ ಮಾತಾಗಿರದು. ಅದು ಗುರುವೆಂಬ ಮಹಾಂತನಿಂದ ಮಾತ್ರ ಸಾಧ್ಯವಾಗುತ್ತದೆ. ಮಹಾಂತನನ್ನು ತೋರಿಸುವವ ಗುರು ಎಂಬುದು ಇಲ್ಲಿ ನಿರ್ವಿವಾದ. ಇನ್ನೂ ಮುಂದುವರಿದು ಜ್ಯೋತಿಯಿಂದಲೇ ನೇತ್ರ, ರಾತ್ರಿಯೊಳು ಕಾಂಬಂತೆ, ಗುರುವಿನಿಂದಲೇ ಸರ್ವಜ್ಞಾನ ಅವನ ಹೊರತಿರುವುದು ಅಜ್ಞಾನ ಎಂದು ಸರ್ವಜ್ಞ ಅಭಿಪ್ರಾಯಪಡುತ್ತಾನೆ.

***ವಿದ್ಯೆ ಕಲಿತಡೆ ಇಲ್ಲ । ಬುದ್ಧಿ ಕಲಿತಡೆ ಇಲ್ಲ ।***

***ಉದ್ಯೋಗ ಮಾಡಿದಡೆ ಇಲ್ಲ, ಗುರುಮುಖವು ।***

***ಇದ್ದಿಲ್ಲದಿಲ್ಲ ಸರ್ವಜ್ಞ ॥***

ಇಲ್ಲಿ ಗುರುಮುಖ ಎಂಬ ಪದದ ಅರ್ಥ ಗುರೂಪದೇಶ ಎಂದಾಗಿದೆ. ಹೆಚ್ಚು ಪದವಿ ಪಡೆದರೂ, ಉನ್ನತ ಉದ್ಯೋಗ ಪಡೆದರೂ ಗುರೂಪದೇಶ ದೊರೆತಾಗ ಮಾತ್ರ ಮುಕ್ತಿ ಎನ್ನುವ ಹಾಗೆ ಗುರು ಕಾರುಣ್ಯವನ್ನು ಸಾರುವ ಅಂಶವನ್ನು ಇಲ್ಲಿ ಕಾಣಬಹುದಾಗಿದೆ. ಗುರು ಎಂಬುವನು ಸುರಧೇನು ಅದನ್ನು ಕರೆದುಂಬಾಗ ಮಾತ್ರ ಶಿಷ್ಯನ ದುರಿತ ಕೋಟಿಗಳು ಹರಿದು ಚಿರಕಾಲ ಸುಖ ಪ್ರಾಪ್ತಿಯಾಗುತ್ತದೆ. ಗುರುವನ್ನು ಅಲಕ್ಷಿಸಿದರೆ ಕಷ್ಟಗಳೇ ಬೆಟ್ಟವಾಗಿ ಎದುರು ನಿಲ್ಲುತ್ತವೆಂದು ನುಡಿಯುತ್ತಾನೆ. ಗುರುವೆಂದು

ನಂಬಿ ಗುಣಗಳಾರಿಸಿದವಗೆ ಇಹವಿಲ್ಲ ಪರವಿಲ್ಲ ನೋಡಣ್ಣ ಎಂಬಂತೆ ಗುರುವಿನ ಜಾತಿಯ ಅರಸಬೇಡೆಂದು, ಗುರುವಿನ ಜಾತಿ ಮುಖ್ಯವಲ್ಲ ಅವ ಹೊಂದಿರುವ ಜ್ಞಾನ ಮುಖ್ಯ ಎಂದು ಹೇಳುತ್ತಾನೆ. ಯೋಗ್ಯ ಮಾರ್ಗದರ್ಶಕನಾದ ಗುರುವಿನ ಜಾತಿ, ಗೋತ್ರ, ವಿದ್ಯೆ, ವಯಸ್ಸು ವಿಚಾರ ಮಾಡಬಾರದು. ಅವನಲ್ಲಿರುವ ಪ್ರೌಢವಾದ ಜ್ಞಾನ ಪ್ರಧಾನವಾದುದು, ಊರಿಂಗೆ ದಾರಿಯನು । ಆರು ತೋರಿದರೇನು? ನಿಜವ ತೋರುವ ಗುರು ಯಾರಾದರೇನು? ಎಂದು ಗುರುವಿನಲ್ಲಿ ಊನ ಎಣಿಸುವ ಅಜ್ಞಾನಿಗಳಿಗೆ ಒಡಲೌಷಧಿಯನ್ನು ನೀಡುತ್ತಾನೆ. ಗುರು ನರನಲ್ಲ ಅವನು ದೇವನೇ ಎಂಬುದು ಸರ್ವಜ್ಞಮೂರ್ತಿಯ ಮನದ ನಿಲುವಾಗಿದೆ. ಸರ್ವಜ್ಞನು 'ದೇವನನ್ನು ತೋರಿಸುವ ಹರಭಕ್ತಿಯುಳ್ಳ ಗುರುವರನು ಓರ್ವನೆ ನರದೈವ ಹಾಗೂ ಪಾಪಗಳನ್ನು ದುರಿತಗಳನ್ನು ದೂರಮಾಡುವ ಸಾಮರ್ಥ್ಯ ಗುರುವಿನಲ್ಲಿದೆ' ಎನ್ನುತ್ತಾನೆ.

*ಬಂಧುಗಳು ಆದವರು । ಬಂದುಂಡು ಹೋಗುವರು ।*

*ಬಂಧನವ ಕಳೆಯಲರಿಯರಾ ಗುರುವಿಗಿಂತ ।*

*ಬಂಧುಗಳುಂಟೆ ಸರ್ವಜ್ಞ ॥*

ಬಂಧುಗಳು ಹಾಗೂ ಗುರುವಿಗಿರುವ ವ್ಯತ್ಯಾಸ ಬಹುತರವಾದುದು, ಅನ್ನವು ನನ್ನಲ್ಲಿರುವ ತನಕ ಎಲ್ಲರೂ ನನ್ನವರೆನ್ನುವರು ಅನ್ನವು ತೀರಿದ ಮರುದಿನವೇ ನನ್ನವರೆನ್ನುವರ್‍ಯಾರಿಲ್ಲ ಎಂಬಂತೆ ಸಂಬಂಧಿಗಳು ಲಾಭದ ದೃಷ್ಟಿಕೋನದೊಂದಿಗೆ ಸಖ್ಯ ಬೆಳೆಸುತ್ತಾರೆ. ಆದರೆ ಗುರುವಿನದು ಪ್ರತಿಫಲ ಅಪೇಕ್ಷೆಯಿಲ್ಲದ ನಿರ್ಮಲವಾದ ಸಂಬಂಧವಾಗಿರುತ್ತದೆ. ಶಿಷ್ಯನು ಸರ್ವತೋಮುಖ ಅಭಿವೃದ್ಧಿಯ ಜೊತೆಗೆ ಭವ ಭಂದನ ಕಳಚುವ ಯೋಚನೆಯಲ್ಲಿರುತ್ತಾನೆ. ಬ್ರಾಹ್ಮಣನಾದ ಗುರುಗೋವಿಂದ ಭಟ್ಟರು ಮುಸ್ಲಿಮನಾದ ಶಿಷ್ಯ ಷರೀಫರಿಗೆ ಮೊದಲು ಸಂಸಾರ ಬಂಧನದ ಸುಳಿಯಲ್ಲಿ ತೊಡಗಿಸಿ ತದನಂತರ ಉದ್ಧರಿಸಿದ್ದು ಜ್ವಲಂತ ಸಾಕ್ಷಿಯಾಗಿ ಎದುರು ನಿಲ್ಲುತ್ತದೆ. ಬಂಧುಗಿಂತಲೂ ಶ್ರೇಷ್ಠನು ಗುರುರಾಯ ಎನ್ನುತ್ತಾ ತಂದೆಗೂ ಗುರುವಿಗೂ ಒಂದು ಅಂತರವುಂಟು । ತಂದೆತೋರುವವನು ಸದ್ಗುರುವನು, ಸದ್ಗುರು ಭವಬಂಧನವ ಕಳೆವನು ಎಂದು ಗುರುವಿನ ಶ್ರೇಷ್ಠತೆಯನ್ನು ಸರ್ವಜ್ಞ ಮೂರ್ತಿಯು ಉಲ್ಲೇಖಿಸುತ್ತಾನೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕ್ತಿ ಎಂಬ ತತ್ವಪದದ ಸಾರದಂತೆ ಭವಬಂಧನಗಳ ತೊಡರು ಬಿಡಿಸಿಕೊಳ್ಳಲು ಗುರುಸೇವೆ ಅಗತ್ಯವಿದೆ. ಗುರುವಿನ ಮನೆಯಲ್ಲಿ ಅರಮನೆಯೇ ಇದೆ ಅರಿವಿನಿಂದ ಸೇರುಒಳಗ ಎಂಬ ಮಾತು ಅಕ್ಷರಶಃ ಸತ್ಯವಾಗಿರುತ್ತದೆ.

ಗುರುವೆಂಬುವನು ಸಾಮಾನ್ಯನಲ್ಲ ಅವನ ಪಾದಕ್ಕೆ ಶಿರಮಣಿದರೆ ಕೈಲಾಸವು ನೆರಮನೆಯಾಗುತ್ತದೆ. ಮರಣಾನಂತರದಲ್ಲಿ ಮುಕ್ತಿಯು ನಿಶ್ಚಯವಾಗಿ ನಿಸ್ಸಂಶಯವಾಗಿ ದೊರಕುತ್ತದೆ. ಅಂತಹ ಗುರುಕಾಣುವ ಸುಷುಮ್ನ ದಾರಿಯ ಬಿಟ್ಟು ಸೀಮಿಸುತ್ತ ತಿರುಗಬ್ಯಾಡ ಸಿಕ್ಕಿ ಕೆಂಚಗ್ಯಾನ ಪೆಳ್ಯಾಗ ಎಂದು ವೇದ್ಯರು ಎಚ್ಚರಸುವಲ್ಲಿ ಘನ ವಿಚಾರವಿದೆ. 'ಹರ ಕೊಲ್ಲಲು ಗುರು ಕಾಯ್ವನು' ಎಂಬ ಪುಲಿಗೆರೆ ಸೋಮನಾಥನ ಉಕ್ತಿಯಂತೆ ಶಿವನ ಕೋಪಕ್ಕೆ ತುತ್ತಾದರೆ ರಕ್ಷಿಸುವದು ಅಸಾಧ್ಯವಾದುದು. ಅದರಲ್ಲಿರುವ ಏಕಮಾತ್ರ ಉಪಾಯವೆಂದರೆ ಗುರುಮಾತ್ರ ಆಗಿದ್ದಾನೆ.

*ಹರಗೆ ಕೈಮುಗಿದರೂ । ನೆರವೀಯಲೊಲ್ಲನು ।*

*ನರರೂಪ ಧರಿಸಿ ಗುರುವಾಗಿ ಬೋಧಿಪಗೆ ।*

*ಸರಿಯ ಹರಕಾಣೆ ಸರ್ವಜ್ಞ ॥*

ತ್ರೇತಾಯುಗದಲ್ಲಿ ದಶರಥ ಮಹಾರಾಜನಿಗೆ ವಶಿಷ್ಠ ಹಾಗೂ ವಿಶ್ವಾಮಿತ್ರರು, ದ್ವಾಪರ ಯುಗದಲ್ಲಿ ಪಾಂಡವ ಕೌವರವಾದಿಗಳು ವ್ಯಾಸ, ಸತ್ಯಂತಪ, ಪರಾಶರ, ಭಾರದ್ವಾಜ ಮುನಿಗಳನ್ನು ದೈವಿ ಸ್ವರೂಪವೆಂದು ಬಗೆದು ಸತ್ಕರಿಸಿರುವುದನ್ನು ಕಾಣಬಹುದಾಗಿದೆ. ಎರಡೂ ಮಹಾಕಾವ್ಯಗಳನ್ನು ಅವಲೋಕಿಸಿದಾಗ ಗುರುವಿನ ಪಾತ್ರ ಹಿರಿದಾದುದೆಂದು, ಕಥೆಯಲ್ಲಾ ಅವರಿಂದಲೇ ಸಾಗಿದಂತೆ ಚಿತ್ರಿಸಲಾಗಿದೆ. ಅದಲ್ಲದೆ ಭಾರತದ ಇತಿಹಾಸವನ್ನು ಪರಿಶೀಲಿಸಿದಾಗ ಮಹಾನ್ ಸಾಮ್ರಾಟರಾದ ಚಂದ್ರಗುಪ್ತ ಮೌರ್ಯ ಹಾಗೂ ಅಶೋಕರಿಗೆ ಚಾಣಕ್ಯಮುನಿ, ಶುದ್ಧೋಧನ ಮಹಾರಾಜನಿಗೆ ಅಸಿತ ಮಹರ್ಷಿ, ಸಮುದ್ರಗುಪ್ತನಿಗೆ ವರಾಹಮಿಹಿರ, ಹಕ್ಕಬುಕ್ಕರಿಗೆ ವಿದ್ಯಾರಣ್ಯರು ಹೀಗೆ ಬೃಹತ್ತಾದ ಪಟ್ಟಿಯೇ ಬೆಳೆಯುತ್ತದೆ. ಈ ರಾಜ್ಯ ಹಾಗೂ ಸಾಮ್ರಾಜ್ಯದ ಸ್ಥಾಪನೆಯಲ್ಲಿ ಭವ್ಯ ಶಕ್ತಿಯಾಗಿ ನಿಂತರೆಂಬುವಲ್ಲಿ ಎರಡು ಮಾತಿಲ್ಲ. ಹರ ಮತ್ತು ಗುರುವಿನ ಮಧ್ಯ ಭಿನ್ನ ಬೇಧಗಳಿಲ್ಲ, ಹರನು ಸ್ಪರ್ಷಕ್ಕೆ ನಿಲುಕದ ಮಾಯಾ ರೂಪಿಯಾದರೆ ಗುರು ಶಿಷ್ಯನ ಜೊತೆಯಲ್ಲಿ ನಿಂತು ರಕ್ಷಿಸುವ ಮಹಾಮಹಿಮನಾಗಿರುವನು.

ಗುರುವಿನ ಸೇವೆ ಅನನ್ಯವಾದುದು ಅದು ತಮಗೆ ಒಲಿದು ಬರಲೆಂದು ಆಸೆ ಪಡುವವರು ಅನೇಕರಿದ್ದಾರೆ. ಗುರುವು ಶಿಷ್ಯನಲ್ಲಿ ಬಯಸುವುದು ಸನ್ನಡತೆ, ಸರಳತೆ, ವಾಕ್‌ಶುದ್ದಿ ಇತ್ಯಾದಿ ವಿಚಾರಗಳನ್ನು, ಅವುಗಳಲ್ಲಿ ಒಂದಿಷ್ಟು ಕೊಂಕಾದರೂ ಸಹಿಸಲಾರನು. ಒಮ್ಮೆ ಕರ್ಣನು ಪರಶುರಾಮರ ಬಳಿ ವಿದ್ಯೆ ಕಲಿಯಲು ಹೋದಾಗ, ಆತನ ವಿನಯವನ್ನು ಸಂಪೂರ್ಣವಾಗಿ ಮೆಚ್ಚಿದರು. ತಮ್ಮಲ್ಲಿದ್ದ ಸಕಲ ವಿದ್ಯೆಯನ್ನು ಮನಪೂರ್ವಕವಾಗಿ ಧಾರೆಯೆರೆದರು. ಕಾಲಾನಂತರದಲ್ಲಿ ಕರ್ಣನೋರ್ವ ಬ್ರಾಹ್ಮಣನಲ್ಲ ಕ್ಷತ್ರಿಯನೆಂದು ತಿಳಿದುಹೋಯಿತು. ಅದೇ ಕ್ಷಣದಲ್ಲಿಯೇ ನಾನು ಕಲಿಸಿದ ವಿದ್ಯೆಯೆಲ್ಲ ಮರೆತುಹೋಗಲೆಂದು ಶಾಪ ಹಾಕಿದರು. ಇದರಿಂದ ಗಹನವಾಗುವ ವಿಚಾರವೇನೆಂದರೆ ಸದ್ಗುರುವಿನ ಹತ್ತಿರ ಸಟೆ ಸಲ್ಲದೆಂಬುದಾಗಿದೆ.

**ಸರ್ವಜ್ಞನ ವಚನಗಳಲ್ಲಿ ಶಿಷ್ಯನಿಗಿರಬೇಕಾದ ಅರ್ಹತೆಗಳು**

ಶಿಷ್ಯನಾದವನು ಹೊಂದಬೇಕಾದ ಅರ್ಹತೆಗಳನ್ನು ಸರ್ವಜ್ಞಮೂರ್ತಿಯು ತಮ್ಮ ತ್ರಿಪದಿಗಳಲ್ಲಿ ಉಲ್ಲೇಖಿಸಿದ್ದಾರೆ. ಜ್ಞಾನಿಯಾದ ಗುರುವಿಗೆ ತಕ್ಕುದಾದ ಶಿಷ್ಯ ದೊರಕಿದರೆ ಫಲಪ್ರದವಾಗುತ್ತದೆ. ಜ್ಞಾನದಾಹವಿಲ್ಲದ ಅನಾದರ, ಅನಾಸಕ್ತಿಗಳಿಂದ ಕೂಡಿದ ಶಿಷ್ಯನಿದ್ದರೆ ಬೋರ್ಗಲ್ಲ ಮೇಲೆ ನೀರುಹಾಕಿದಂತೆ ನಿಷ್ಫಲವಾಗುತ್ತದೆ ಎನ್ನುತ್ತಾನೆ.

*ಭಕ್ತಿಯಿಲ್ಲದ ಶಿಷ್ಯ । ಗೊತ್ತಿ ಕೊಟ್ಟುಪದೇಶ*

*ಬತ್ತಿದಾ ಕೆರೆಯ ಬಯಲಲ್ಲಿ ರಾಜಾನ್ನ ।*

*ಬಿತ್ತಿಬೆಳೆದಂತೆ ಸರ್ವಜ್ಞ ॥*

ಕಲಿಯುವ ಇಚ್ಛೆಯಿಲ್ಲದ ಶಿಷ್ಯನನ್ನು ಬತ್ತಿದ ಕೆರೆಗೆ ಹೋಲಿಸುತ್ತಾರೆ. ಶ್ವಾನವು ತೆಂಗಿನ ಕಾಯಿಯನ್ನು ಮೆಲಬಲ್ಲುದೆ, ಹೀನ ಮನದವನಿಗುಪದೇಶ ವಿತ್ತಡೆ ಹಾನಿ ಕಾಣಯ್ಯ, ನೀಚಮನಸ್ಸಿನ ಶಿಷ್ಯನಿಗೆ ಉಪದೇಶ ಮಾಡಿದರೆ ಹಾವಿಗೆ ಹಾಲೆರೆದಂತೆ ಅಪಾಯಕಾರಿ ಎಂಬುದು ಆತನ ಮಾತಿನ ತಾತ್ಪರ್ಯವಾಗಿದೆ.

*ಬ್ರಹ್ಮಜ್ಞಾನ ಅರಿವನರಿಯದ ಗುರುವು । ಪರವನರಿಯದ ಶಿಷ್ಯ ।*

*ನೆಲೆಯರಿಯದೋದು, ಇವು ಮೂರು ಅಂಧಕನು ।*

*ತಿರುಗಾಡಿದಂತೆ ಸರ್ವಜ್ಞ ॥*

ಇಲ್ಲಿ ಬ್ರಹ್ಮಜ್ಞಾನವೆಂದರೆ 'ಆತ್ಮ ವಸ್ತುವಿನ ಜ್ಞಾನ'ವಿಲ್ಲದ ಗುರುವೂ, ಪರಲೋಕಜ್ಞಾನವಿಲ್ಲದ ಶಿಷ್ಯನೂ, ಅರ್ಥ ಅರಿಯದ ಓದು ಇವು ಮೂರು ಕುರುಡನು ತಿರುಗಾಡಿದಂತೆ ನಿರರ್ಥಕವಾಗುತ್ತದೆ. ಈ ರೀತಿಯಾಗಿ ಸರ್ವಜ್ಞನ ತ್ರಿಪದಿಗಳನ್ನು ಕೆದಕಿದಾಗ ನೂರಾರು ಗುರುಶಿಷ್ಯರ ಅರ್ಹತೆಗಳು ಕಾಣಸಿಗುತ್ತವೆ. ಅವುಗಳನ್ನು ಒಂದು ಚೊಂಬಿನಲ್ಲಿ ಸಂಗ್ರಹಿಸುವುದು ಸುಲಭಸಾಧ್ಯವಲ್ಲ. ಅದು ಕರಿಯನ್ನು ಕನ್ನಡಿಯಲ್ಲಿ ಹಿಡಿಯುವ ಕಾರ್ಯವಾಗುವುದು.

**ಉಪಸಂಹಾರ**

ಗುರುವು ಪಾಂಡಿತ್ಯಪೂರ್ಣನಾಗಿ ಆದರ್ಶಪ್ರಾಯನಾಗಿದ್ದರೆ ಶಿಷ್ಯನೂ ಸಹ ಪ್ರಾಜ್ಞನಾಗಲು ಸಾಧ್ಯವಾಗುತ್ತದೆ. ಪ್ರತಿಯೋರ್ವ ಶಿಷ್ಯನು ಅನುಕರಿಸುವುದು ತನ್ನ ಗುರುವನ್ನು ಹೀಗಾಗಿ ಅವನನ್ನೇ ಮಾದರಿ ನಾಯಕನಾಗಿ ಆರಿಸಿಕೊಳ್ಳುತ್ತಾನೆ. ಸರ್ವಜ್ಞಮೂರ್ತಿಯ ತ್ರಿಪದಿಯು ತಿಳಿಸುವಂತೆ ಎತ್ತಾಗಿ, ತೊತ್ತಾಗಿ, ಹಿತ್ತಲದ ಗಿಡವಾಗಿ, ಪಾದದ ಕೆರವಾಗಿ, ಗುರುವಿನ ಹತ್ತಿರವಿರಬೇಕೆನ್ನುತ್ತಾನೆ. ಆಗ ಮಾತ್ರ ಗುರು ಕಾರುಣ್ಯವನ್ನು ಪಡೆದು ಶಿಷ್ಯನು ಜ್ಞಾನ ನಿಧಿಯಾಗಿ ಭವಶರಧಿಯನ್ನು ನಿರಾಯಾಸವಾಗಿ ದಾಟಲು ಸಾಧ್ಯವಾಗುತ್ತದೆ. ಸಾಕ್ರಟಿಸ್–ಪ್ಲೇಟೋ–ಅರಿಸ್ಟಾಟಲ್–ಅಲೆಗ್ಸಾಂಡರ್‌ರಂತಹ ಗುರು ಶಿಷ್ಯ ಪರಂಪರೆ ದೊರಕುವುದು ಅತಿ ವಿರಳವಾಗಿದ್ದು, ಅದು ಪೂರ್ವಜನ್ಮದ ಪುಣ್ಯ ಬಲದಿಂದ ದೊರಕುವಂತಾದಾಗಿದೆ. ಅಭಿಪ್ರಾಯದಲ್ಲಿ ಭಿನ್ನತೆಯಿದ್ದರೂ ಶಿಷ್ಯ ಗುರುವನ್ನು ಗೌರವಿಸುವ, ಗುರು ಶಿಷ್ಯನನ್ನು ತನ್ನ ಪುತ್ರನಂತೆ ಬಗೆಯುವ ಪರಿಯನ್ನು ಇವರಿಂದಲೇ ಕಲಿಯಬೇಕೆಂದರೆ ಅತಿಶಯವಲ್ಲ.

**ಪರಾಮರ್ಶನ ಗ್ರಂಥಗಳು**

- ಸರ್ವಜ್ಞತಜ್ಞ ಉತ್ತಂಗಿ ಚನ್ನಪ್ಪ. (1928) ಸರ್ವಜ್ಞನ ವಚನಗಳು ಅಂಕುಶ ಪ್ರಕಾಶನ.
- ಎಲ್.ಬಸವರಾಜು. (2016) ಪಾರಮಾರ್ಥ. ಸ್ವಪ್ನ ಪ್ರಕಾಶನ ಬೆಂಗಳೂರು.
- ಭೀ. ಪೂಜಾರ. (2008) ಸರ್ವಜ್ಞನ ವಚನಗಳು. ಶಾಬಾದಿಮಠ ಪ್ರಕಾಶನ.